

ಕಥಾವನ ಭಿತ್ತಿ

ಕಥಾವನದಲ್ಲಿ ಪುಸ್ತಕಗಳ ಓದು ಮತ್ತು ಚಿತ್ರ ಬಿಡಿಸುವುದರಲ್ಲಿ ತಲ್ಲೀನರಾದ ಹೆಣ್ಣುಮಕ್ಕಳು. ಈ ಉತ್ಸವಗಳಲ್ಲಿ ಅನೇಕ ಸೃಜನಾತ್ಮಕ ಚಟುವಟಿಕೆಗಳ ಜೊತೆ ಪುಸ್ತಕ ಪ್ರಕಾಶಕರ ವತಿಯಿಂದ ಸದಭಿರುಚಿಯ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟವನ್ನೂ ಏರ್ಪಡಿಸುತ್ತಿರುವುದು ಮಕ್ಕಳಿಗೆ ಓದುವ ಅಭಿರುಚಿಯನ್ನು ಬೆಳೆಸುವಲ್ಲಿ ಸಹಾಯಕವಾಗಿದೆ.





14ನೇ ನವೆಂಬರ್ 2016 – ಅತ್ತಿಬೆಲೆಯ ಬಾಲಕರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ಕಥಾವನ ಸಾಹಿತ್ಯೋತ್ಸವದಲ್ಲಿ ಮಕ್ಕಳು ಸ್ವಾರಸ್ಯಕರವಾಗಿ ಕಥೆ ಕೇಳುತ್ತಿರುವ ಚಿತ್ರ. ವರ್ಷಗಳಿಂದ ನಡೆಸಿಕೊಂಡು ಬಂದಿರುವ ಈ ಉತ್ಸವದಲ್ಲಿ ಮಕ್ಕಳು ಕಥೆಯ ಓದು, ಚಿತ್ರರಚನೆ, ಅಭಿನಯ, ಬೊಂಬೆಯಾಟಗಳಂಥ ವಿಭಿನ್ನ ಸಾಹಿತ್ಯಾಧಾರಿತ ಚಟುವಟಿಕೆಗಳಲ್ಲಿ ಪಾಲ್ಗೊಂಡು ಸಮೃದ್ಧ ಭಾಷಾ ವಾತಾವರಣದಲ್ಲಿ ಕಲಿಕೆಯಲ್ಲಿ ತೊಡಗುತ್ತಾರೆ. ಶಿಕ್ಷಕರಿಗೂ ಸಾಹಿತ್ಯವನ್ನು ಆಸ್ವಾದಿಸುವ ಅಧಿವೇಶನಗಳಿರುತ್ತವೆ.

ಶಿಕ್ಷಕರಿಗೆ ಓದುವ ಹವ್ಯಾಸ ಬೆಳೆಸಿಕೊಳ್ಳುವುದು, ಪರಿಣಾಮಕಾರಿಯಾಗಿ ಗ್ರಂಥಾಲಯ ಬಳಸಿಕೊಳ್ಳುವುದು ತುಂಬಾ ಕಷ್ಟವೇ ಎನ್ನಿಸುತ್ತದೆ. ಪಠ್ಯ-ಪುಸ್ತಕಗಳು, ಸಾಹಿತ್ಯ ಎನ್ನುವ ಕೃತಕ ವಿಭಜನೆ ಅವರ ಬೋಧನಾಕ್ರಮದಲ್ಲಿ ಬೇರೂರಿಹೋಗಿದೆ. ವ್ಯವಸ್ಥೆಯಲ್ಲಿನ ಕೆಲಸದ ಒತ್ತಡವೂ ಅವರನ್ನು ಪಠ್ಯಪುಸ್ತಕಗಳಾಚೆ ನೋಡಲಾಗದಂತೆ ಮಾಡಿಬಿಡುತ್ತದೆ.

ಕಥಾವನ

ಒಂದು ವಿಶಿಷ್ಟ ಸಾಹಿತ್ಯೋತ್ಸವ

ಕಥೆ ಅಂದರೆ ಯಾರಿಗೆ ಇಷ್ಟವಿಲ್ಲ? ಅವು ಎಲ್ಲರ ಹೃದಯಕ್ಕೂ ಹತ್ತಿರವೇ. ಕಥೆಗಳು ಚಿಕ್ಕವರು, ದೊಡ್ಡವರು ಎಲ್ಲರನ್ನೂ ಆಕರ್ಷಿಸುವ ಸಾಮರ್ಥ್ಯವನ್ನು ಹೊಂದಿವೆ ಹಾಗೂ ಅವರನ್ನು ತುದಿಗಾಲಲ್ಲಿ ನಿಲ್ಲುವಂತೆ ಮಾಡುತ್ತವೆ. ಹಾಗಾಗಿ ಎಲ್ಲರೂ ಕುತೂಹಲ, ಜಿಜ್ಞಾಸೆ ಮತ್ತು ಭಾವಪರವಶತೆಯನ್ನು ಉಂಟುಮಾಡುವ ಕಥೆಗಳನ್ನು ಓದುವುದು ಸಹಜ. ಹೀಗೆ ನಾವು ನಮ್ಮ ಏಕಾಂತದಲ್ಲಿ ನಮ್ಮದೇ ಆದ ಸಂತೋಷವನ್ನು ನಿರ್ಮಿಸಿಕೊಳ್ಳುತ್ತೇವೆ. ಕಥೆಯೊಳಗೆ ಹೊಕ್ಕು, ಕಥಾಹಂದರ ಮತ್ತು ಪಾತ್ರಗಳಿಗೆ ಎದುರಾಗಿ ಭಾಷೆ, ತಂತ್ರ ಮತ್ತು ನಿರೂಪಣಾ ಶೈಲಿಯ ಔಚಿತ್ಯವನ್ನು ಗ್ರಹಿಸುವುದೇ ಒಂದು ಸಂತೋಷಕರ ಹಾಗೂ ಹೃದ್ಯ ಅನುಭವ. ಇಂತಹ ತೊಡಗಿಕೊಳ್ಳುವಿಕೆಯು ಮೊದಲಿಗೆ ಅಜ್ಜಿಯ ಅಥವಾ ಚಂದಮಾಮದ ಕಥೆಗಳಿಂದ ಆರಂಭವಾಗಬಹುದು. ಆದರೆ, ಅದು ನಮ್ಮನ್ನು ಮುಂದೆ ಗಂಭೀರ ಓದಿಗೂ ಹಚ್ಚಬಹುದು. ಒಂದೊಮ್ಮೆ ಪೋಷಕರು ಹಾಗೂ ಶಿಕ್ಷಕರು ಓದಿನ ಹವ್ಯಾಸವನ್ನು ಬೆಳೆಸಿಕೊಳ್ಳಲು ಬೇಕಾದ ಸೂಕ್ತ ಅವಕಾಶವನ್ನು ಮಕ್ಕಳಿಗೆ ತುಂಬಾ ಚಿಕ್ಕ ವಯಸ್ಸಿನಲ್ಲಿಯೇ ಒದಗಿಸಿದರೆ, ಅವರದನ್ನು ಜೀವನಪರ್ಯಂತ ಜತನದಿಂದ ಮುಂದುವರೆಸುವ ಸಂಭವ ಹೆಚ್ಚು.

ಆದಾಗ್ಯೂ ಇಂದಿನ ನಮ್ಮ ಗಡಿಬಿಡಿಯ ಹಾಗೂ ಯಾಂತ್ರಿಕ ಜೀವನ ಶೈಲಿಯಲ್ಲಿ, ನಿರಂತರವಾಗಿ ದಾಳಿ ಮಾಡುತ್ತಿರುವ ವಿವಿಧ ಆಕರ್ಷಣೆಗಳ

ನಡುವೆ ಪುಸ್ತಕಗಳನ್ನು ಎರವಲು ಪಡೆಯುವ ಅಥವಾ ಖರೀದಿಸುವ ಹಾಗೂ ಓದುವ ಅಭ್ಯಾಸವೇ ಮಕ್ಕಳಲ್ಲಿ ತುಂಬಾ ಕಡಿಮೆಯಾಗುತ್ತಿದೆ ಎಂದು ಮಕ್ಕಳ ಬೆಳವಣಿಗೆಯನ್ನು ಜಾಗರೂಕತೆಯಿಂದ ಗಮನಿಸುತ್ತಿರುವವರು ಗೋಳಾಡುತ್ತಾರೆ. ಮಕ್ಕಳಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸಬೇಕಾದ ಶಿಕ್ಷಕರಲ್ಲಿಯೇ ಅದು ಕ್ಷೀಣಿಸುತ್ತಿದೆ (ಭಾಷೆಯನ್ನು ಬೋಧಿಸುವವರೂ ಸೇರಿ) ಎನ್ನುವ ಸಂಗತಿಯು ದಿಗಿಲು ಹುಟ್ಟಿಸುವಂತಹದ್ದು. ಈ ಖೇದಕಾರಿ ಬೆಳವಣಿಗೆಯ ಕಾರಣಗಳನ್ನು ಕಂಡುಹಿಡಿಯುವ ಯಾವುದೇ ಪ್ರಯತ್ನಗಳು ಕಂಡುಬರುತ್ತಿಲ್ಲ. ಜೊತೆಗೆ, ಶಿಕ್ಷಕರಲ್ಲಿ ಓದುವ ಹವ್ಯಾಸವನ್ನು ಹೇಗೆ ರೂಢಿಸಬೇಕು, ಅವರ ಮೂಲಕ ಅದನ್ನು ಹೇಗೆ ವ್ಯವಸ್ಥಿತ ರೀತಿಯಲ್ಲಿ ಮಕ್ಕಳಲ್ಲಿಯೂ ಬೆಳೆಸಬೇಕು ಎನ್ನುವದರ ಕುರಿತು ಸಾಕಷ್ಟು ಪ್ರಯತ್ನಗಳು ನಡೆಯುತ್ತಿಲ್ಲ.

ಶಾಲೆಗಳಲ್ಲಿ ಹಲವಾರು ತುರ್ತು ಹಾಗೂ ಆ ಕ್ಷಣಕ್ಕೆ ನಿಭಾಯಿಸಬೇಕಾದ ಸವಾಲುಗಳಿರುತ್ತವೆ. ಬಹಳಷ್ಟು ಶಿಕ್ಷಕರಿಗೆ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳುವುದು ಹಾಗೂ ಗ್ರಂಥಾಲಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ತುಂಬಾ ಕಷ್ಟವೇ ಎನ್ನಿಸುತ್ತದೆ. ಪಠ್ಯಪುಸ್ತಕಗಳು ಹಾಗೂ ಸಾಹಿತ್ಯ ಎನ್ನುವ ಕೃತಕ ವಿಭಜನೆಯು ಅವರ ಬೋಧನಾಕ್ರಮದಲ್ಲಿ ಆಳವಾಗಿ ಬೇರೂರಿಹೋಗಿದೆ. ವ್ಯವಸ್ಥೆಯಲ್ಲಿನ ಕೆಲಸದ ಒತ್ತಡವು ಅವರನ್ನು ಪಠ್ಯಪುಸ್ತಕಗಳಾಚೆ ನೋಡಲಾಗದಂತೆ ಮಾಡಿಬಿಡುತ್ತದೆ. ವಿಶಾಲಮಟ್ಟದ ಸಾಮಾಜಿಕ ಹಾಗೂ ಆರ್ಥಿಕ ವೈಪರೀತ್ಯಗಳು ಅವರ ದೃಷ್ಟಿಕೋನ ಮತ್ತು ಗ್ರಹಿಕೆಯನ್ನು ಪರೀಕ್ಷೆ, ಫಲಿತಾಂಶ ಹಾಗೂ ಸ್ಪರ್ಧಾತ್ಮಕ ಜಗತ್ತಿಗೆ ಮಕ್ಕಳನ್ನು ಸಿದ್ಧಪಡಿಸುವುದಕ್ಕೆ ಸೀಮಿತಗೊಳಿಸಿವೆ. ಅವರು ದೈನಂದಿನ ಬದುಕಿನ ಒತ್ತಡದಲ್ಲಿ ತಮ್ಮ ಅಸ್ತಿತ್ವ, ಗುರುತು ಹಾಗೂ ಸೃಜನಶೀಲತೆಯನ್ನೇ ಕಳೆದುಕೊಳ್ಳುತ್ತಿದ್ದಾರೆ. ಇದರ ಸಾಂಸ್ಕೃತಿಕ ಪರಿಣಾಮವೆಂದರೆ ಮನೆಗಳಲ್ಲಿ, ಶಾಲೆಗಳಲ್ಲಿ ಮತ್ತು ಸಮುದಾಯಗಳಲ್ಲಿ ಸಾಹಿತ್ಯಕ ಒಡನಾಟಕ್ಕೆ ಹಾಗೂ ಖುಷಿಯ ಓದಿಗೆ ಬೇಕಾದ ಪ್ರಶಸ್ತ ವಾತಾವರಣವನ್ನು ನಿರ್ಲಕ್ಷಿಸಲಾಗುತ್ತದೆ.

> ಈ ಹಿನ್ನೆಲೆಯಲ್ಲಿ ಮಕ್ಕಳ ವಾರ್ಷಿಕ ಸಾಹಿತ್ಯೋತ್ಸವ, 'ಕಥಾವನ'ವನ್ನು ನಮ್ಮ ಸಂಸ್ಥೆಯ ಆಶ್ರಯದಲ್ಲಿ ಕಳೆದ ಐದು ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ. ಇದು, ಸಮೃದ್ಧ ಸಾಹಿತ್ಯಿಕ ಅನುಭವವನ್ನು ಹೊಂದಲು ಅನುಕೂಲಕರವಾದ ವಾತಾವರಣವನ್ನು ಒದಗಿಸುವ ಮೂಲಕ ಶಿಕ್ಷಕರು ಮತ್ತು ಮಕ್ಕಳಲ್ಲಿ ಓದುವ ಹವ್ಯಾಸವನ್ನು ಮತ್ತೆ ಚಿಗುರಿಸುವ ಮುಖ್ಯ ವೇದಿಕೆಗಳಲ್ಲಿ ಒಂದು. ಸಾಹಿತ್ಯದಲ್ಲಿ ಆಸಕ್ತಿಯನ್ನು ಹುಟ್ಟಿಸುವುದು, ಓದುವ ಹವ್ಯಾಸವನ್ನು ಬೆಳೆಸುವುದು ಹಾಗೂ ತನ್ನದೇ ಆದ ಸಾಹಿತ್ಯಿಕ ಸಂವೇದನೆಗಳನ್ನು ಬೆಳೆಸಿಕೊಳ್ಳಲು ನೆರವಾಗುವುದು ಇವು ಉತ್ಸವದ

ಮುಖ್ಯ ಉದ್ದೇಶಗಳಲ್ಲಿ ಕೆಲವು. ಗಮನವನ್ನು ಮುಖ್ಯವಾಗಿ ಬೆಂಗಳೂರು ಹಾಗೂ ಸುತ್ತಮುತ್ತಲಿನ ಸರ್ಕಾರಿ ಶಾಲೆಗಳ ಮೇಲೆ ಕೇಂದ್ರೀಕರಿಸಲಾಗಿದೆ. ಬಹುತೇಕವಾಗಿ ಎಲ್ಲ ಕಾರ್ಯಕ್ರಮಗಳನ್ನೂ ಕನ್ನಡದಲ್ಲಿಯೇ ನಡೆಸಲಾಗುತ್ತದೆ. ಇಂದು ನೂರಾರು ಶಾಲೆಗಳಲ್ಲಿ ಕಂಡುಬರುತ್ತಿರುವ ಮತ್ತೊಂದು ಅಂಶವೆಂದರೆ, ಸಾಕಷ್ಟು ಪ್ರಮಾಣದ ಗ್ರಂಥಾಲಯ ಸಂಪನ್ಮೂಲಗಳನ್ನು ಹೊಂದಿದ್ದರೂ ಅವರಿಗೆ ಆ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಸರಿಯಾದ ಮಾರ್ಗದರ್ಶನದ ಕೊರತೆಯಿರುವುದು. ಇತ್ತೀಚೆಗೆ ಅತ್ತಿಬೆಲೆ ಮತ್ತು ಸರ್ಜಾಪುರಗಳ ಸುತ್ತಮುತ್ತ ಆಯೋಜಿಸಲಾಗಿದ್ದ, ಕಥಾವನದ ಸತತ ಐದನೇ ಆವೃತ್ತಿಯಲ್ಲಿ, ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳು ಮತ್ತು ಶಿಕ್ಷಕರಿಬ್ಬರಿಗೂ ಉಪಯುಕ್ತವಾಗುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ದೊಡ್ಡ ಪ್ರಮಾಣದಲ್ಲಿ ನಡೆಯುವ ಮಕ್ಕಳ ಕಾರ್ಯಕ್ರಮ

ಕಳೆದ ತಿಂಗಳು ಅತ್ತಿಬೆಲೆ ಮತ್ತು ಅದರ ಸುತ್ತಮುತ್ತಲಿನ ಸರ್ಕಾರಿ ಶಾಲೆಗಳ ಸುಮಾರು 1100 ಮಕ್ಕಳು, ನಿಜಕ್ಕೂ ನೆನಪಿಟ್ಟುಕೊಳ್ಳುವಂತಹ ಮಕ್ಕಳ ದಿನಾಚರಣೆಯೊಂದರಲ್ಲಿ ಪಾಲ್ಗೊಂಡರು. ವಿವಿಧ ಸಂಪನ್ಮೂಲ ಸಂಸ್ಥೆ ಹಾಗೂ ವ್ಯಕ್ತಿಗಳ ಸಹಯೋಗದಲ್ಲಿ ಸುಮಾರು ಹದಿನೈದು ರೀತಿಯ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಸಾಹಿತ್ಯಿಕ ಹಾಗೂ ಸೌಂದರ್ಯಾತ್ಮಕ ಸಂವೇದನೆಗಳನ್ನು ಉತ್ತಮಗೊಳಿಸುವ ಮತ್ತು ಸಂಸ್ಕರಿಸುವ ಗುರಿಯನ್ನು ಹೊಂದಿದ್ದ ಚಟುವಟಿಕೆಗಳಲ್ಲಿ ಅವರು ಮಕ್ಕಳನ್ನು ತೊಡಗಿಸಿದರು. ಅಲ್ಲಿ ತೆರೆದ ಮಳಿಗೆಗಳಲ್ಲಿ ಗುಂಪು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದ್ದು ಸುಮಾರು ಮೂವತ್ತು ಮಕ್ಕಳನ್ನು ಹೊಂದಿದ್ದ ವಿವಿಧ ಗುಂಪುಗಳು ಅದರಲ್ಲಿ ಭಾಗವಹಿಸಿದವು. ಮಕ್ಕಳಿಗೆಂದು ವಿನ್ಯಾಸಗೊಳಿಸಲಾದ ಚಟುವಟಿಕೆಗಳ ಕುರಿತು ಕೆಲ ವಿವರಣೆಯನ್ನು ನೀಡಿದರೆ, ಅವುಗಳಲ್ಲಿ ಮಕ್ಕಳ ತೊಡಗಿಕೊಳ್ಳುವಿಕೆಯ ಚಿತ್ರಣ ದೊರೆಯುತ್ತದೆ.

- **ಚಿತ್ರಕಥೆ, ಹಾಡು ಮತ್ತು ಸೂತ್ರದ ಗೊಂಬೆಗಳನ್ನು ಬಳಸಿ ಕಥೆ ಹೇಳುವುದು:** ಅಲ್ಲಿನ ಕಥಾಗೋಷ್ಠಿಗಳಲ್ಲಿ ಕಥೆ ಪುಸ್ತಕ, ಹಾಡು ಮತ್ತು ಸೂತ್ರದ ಗೊಂಬೆಗಳೂ ಇದ್ದವು. ಮಕ್ಕಳನ್ನು ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದರ ಮೂಲಕ ಸುಗಮಕಾರರು 'ಪಂಚರಂಗಿ' ಎನ್ನುವ ಹಕ್ಕಿಯ ಕಥೆಯನ್ನು ಸೂಕ್ತ ಮುಖಭಾವ, ಹಾವಭಾವ ಹಾಗೂ ಸೂತ್ರದ ಗೊಂಬೆಗಳನ್ನು ಬಳಸಿ ನಿರೂಪಿಸಿದರು. ಮಕ್ಕಳು ಕಥೆಯನ್ನು ಕೇಳಿ ಮುಗಿದ ಮೇಲೆ ಅವರಿಗೆ

ಕೇವಲ ಬಾಹ್ಯ ರೇಖೆಗಳಿರುವ ಹಕ್ಕಿಯ ಚಿತ್ರವೊಂದನ್ನು ಕೊಟ್ಟು ಐದು ಬಣ್ಣಗಳನ್ನು ಬಳಸಿ ಅದಕ್ಕೆ ಬಣ್ಣ ತುಂಬುವಂತೆ ಹೇಳಲಾಯಿತು. ಹಕ್ಕಿಗೆ ಒಂದು ಹೆಸರನ್ನು ಕೊಡುವಂತೆ ಹಾಗೂ ಹಕ್ಕಿ ಎಲ್ಲಿ ವಾಸಿಸುತ್ತದೆ, ಏನನ್ನು ತಿನ್ನುತ್ತದೆ ಇತ್ಯಾದಿಗಳನ್ನು ಉಲ್ಲೇಖಿಸುವ ಸಂಕ್ಷಿಪ್ತ ವಿವರಣೆಯೊಂದನ್ನು ಬರೆಯುವಂತೆ ಕೂಡ ಹೇಳಲಾಗಿತ್ತು. ಮಕ್ಕಳು ಚಟುವಟಿಕೆಯಲ್ಲಿ ತುಂಬಾ ಸಂತೋಷದಿಂದ ತೊಡಗಿಕೊಂಡಂತೆ ಕಂಡರು. ಒಬ್ಬ ಹುಡುಗ ಮತ್ತು ಒಂದು ಮರದ ಕಥೆಯನ್ನೂ ಕೂಡ ಇದೇ ರೀತಿಯಲ್ಲಿ ಹೇಳಲಾಯಿತು. ಕಥೆಯ ಕೊನೆಯಲ್ಲಿ ಮಕ್ಕಳಿಗೆ ಬಿಳಿಯ ಹಾಳೆಗಳನ್ನು ಕೊಡಲಾಯಿತು. ಅವುಗಳಿಗೆ ಹಸಿರು ಬಣ್ಣವನ್ನು ತುಂಬಿ ಮರದ ಆಕಾರದಲ್ಲಿ ಮಡಚಬಹುದಿತ್ತು. ಇದನ್ನೂ ಕೂಡ ಮಕ್ಕಳು ತುಂಬ ಇಷ್ಟಪಟ್ಟರು.

- **ರಂಗ ಚಟುವಟಿಕೆ:** ಮೂವತ್ತು ಮಕ್ಕಳ ಒಂದು ಗುಂಪನ್ನು ಎರಡು ಗುಂಪುಗಳಾಗಿ ವಿಭಜಿಸಲಾಯಿತು. ಎರಡೂ ಗುಂಪುಗಳಿಗೂ ಕಥೆಯೊಂದನ್ನು ಸೂಕ್ತ ಅಭಿವ್ಯಕ್ತಿ ಹಾಗೂ ಅನುವಾದದೊಡನೆ ಓದಿ ಹೇಳಲಾಯಿತು. ಕಥೆಯನ್ನು ಕೇಳಿದ ನಂತರ, ಅದರೊಳಗಿನ ತಮಗಿಷ್ಟದ ಪಾತ್ರಗಳನ್ನು ಅಭಿನಯಿಸಲು ಆರಿಸಿಕೊಳ್ಳುವಂತೆ ಮಕ್ಕಳಿಗೆ ಬಿಡಲಾಯಿತು. ನಂತರ ಅವರಿಗೆ ಆ ಆಯ್ದ ಪಾತ್ರಗಳಿಗೆ ಅಗತ್ಯವಾದ ವೇಷಭೂಷಣಗಳನ್ನು ಹಾಗೂ ಪರಿಕರಗಳನ್ನು ಕೊಡಲಾಯಿತು. ಸುಗಮಕಾರರ ಅಲ್ಪಸ್ವಲ್ಪ ನೆರವಿನೊಂದಿಗೆ ಅವರು ಕಥೆಯನ್ನು ನಾಟಕವಾಗಿ ಅಭಿನಯಿಸಿದರು. ಆರಂಭದಲ್ಲಿ ಸ್ವಲ್ಪ ಸಂಕೋಚ ಹಾಗೂ ಹಿಂಜರಿಕೆಯಿದ್ದರೂ ಅವರು ಅದನ್ನು ಬೇಗನೆ ಗೆದ್ದು ತಮ್ಮ ಪಾತ್ರಗಳನ್ನು ಚೆನ್ನಾಗಿ ಅಭಿನಯಿಸಿದರು. ಮಕ್ಕಳು ಚಟುವಟಿಕೆಯಲ್ಲಿ ಸಂತೋಷದಿಂದ ತೊಡಗಿದ್ದಂತೆ ತೋರಿತು.
- **ಕಥೆ ಕಥೆ ಕಾರಣ:** ಈ ಗುಂಪಿನಲ್ಲಿ ಏಳು ಸದಸ್ಯರಿದ್ದರು. ಅವರು ಮಕ್ಕಳನ್ನು ವಿವಿಧ ರೀತಿಗಳಲ್ಲಿ ತೊಡಗಿಕೊಳ್ಳುವಂತೆ ಮಾಡಿದರು. ಪ್ರಸಿದ್ಧ ಕವಿ ಎಚ್. ಎಸ್. ವೆಂಕಟೇಶಮೂರ್ತಿಯವರು ಬರೆದ ಹಾಡುಗಳನ್ನು ಕಲಾವಿದರು ಇಂಪಾಗಿ ಹಾಡಿದರು ಹಾಗೂ ಮಕ್ಕಳು ಅದನ್ನು ಒಟ್ಟಾಗಿ ಅನುಕರಿಸಿದರು. ರಾಮಾಯಣ ಮತ್ತು ಮಹಾಭಾರತಗಳಿಂದ ತೆಗೆದುಕೊಂಡ ಕಥೆಗಳ ನಿರೂಪಣೆ, ಚಿತ್ರಗಳನ್ನು ನೋಡಿ ಅಭಿನಯದ ಕಥೆಗಳ ರಚನೆ, ಜನಪ್ರಿಯ ಹಾಡುಗಳ ಸಾಹಿತ್ಯವನ್ನು ಬದಲಿಸಿ ಶಿಶುಸ್ನೇಹಿ ಸಾಹಿತ್ಯದ ಅಳವಡಿಕೆ ಇವು ಇನ್ನಿತರ ವಿಧಾನಗಳು. ಮಕ್ಕಳ ಉತ್ಸಾಹ ಮತ್ತು ಚೈತನ್ಯದ ಮಟ್ಟ ಅತ್ಯುತ್ತಮವಾಗಿತ್ತು. ಊಟದ ನಂತರ, ಬಹುತೇಕ ಮಕ್ಕಳನ್ನು ಈ ಗುಂಪು ತೊಡಗಿಸಿಕೊಂಡಿತು.

ಶಿಕ್ಷಕರಿಗಾಗಿ ಕಾರ್ಯಾಗಾರ

■ **ಓದುಗರಾಗಿ ಶಿಕ್ಷಕರು:** ಶಿಕ್ಷಕರು ಓದಿನ ಕುರಿತಾದ ತಮ್ಮ ಪ್ರೀತಿಯನ್ನು ಮತ್ತೆ ಜೀವಂತಗೊಳಿಸಿಕೊಳ್ಳಲು ಹಾಗೂ ಸಾಹಿತ್ಯವನ್ನು ಅಸ್ವಾದಿಸಲು, ಆ ಕುರಿತು ಚರ್ಚೆಗೆ ಬೇಕಾಗುವ ಕೌಶಲ್ಯವನ್ನು ಹರಿತಗೊಳಿಸಿಕೊಳ್ಳಲು ಅನುವಾಗುವ ನಿಟ್ಟಿನಲ್ಲಿ 'ಓದುಗರಾಗಿ ಶಿಕ್ಷಕರು' ಎಂಬ ವಿಷಯದ ಕುರಿತು ಒಂದು ದಿನದ ಎರಡು ಕಾರ್ಯಾಗಾರಗಳನ್ನು ವಿನ್ಯಾಸಗೊಳಿಸಲಾಗಿತ್ತು. ಒಂದು ಕಾರ್ಯಾಗಾರವು ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ನಡೆದರೆ, ಇನ್ನೊಂದು ಸಂಪೂರ್ಣವಾಗಿ ಕನ್ನಡದಲ್ಲಿಯೇ ಇತ್ತು. ಈ ಅಧಿವೇಶನಗಳು, ಭಾಗವಹಿಸಿದ ಹಲವಾರು ಶಿಕ್ಷಕರು ಹಿಂದೆ ತಾವು ಓದನ್ನು ಇಷ್ಟಪಡುತ್ತಿದ್ದ ಹಾಗೂ ಅದರಲ್ಲಿ ಆನಂದವನ್ನು ಪಡೆಯುತ್ತಿದ್ದ ದಿನಗಳನ್ನು ನೆನಪಿಸಿಕೊಳ್ಳುವಂತೆ ಮಾಡಿದವು. ಅನುಭವಿ ಸಂಪನ್ಮೂಲ ವ್ಯಕ್ತಿಗಳು, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರತ್ಯೇಕವಾಗಿ ನಡೆಸಿಕೊಟ್ಟ ಅಧಿವೇಶನಗಳ ಅವಧಿಯಲ್ಲಿ, ಸಣ್ಣ ಸಣ್ಣ ಗುಂಪುಗಳಾಗಿ ಅದರಲ್ಲಿ ಭಾಗವಹಿಸಿದ್ದ ಶಿಕ್ಷಕರು ಆಯಾ ಭಾಷೆಗಳಲ್ಲಿನ ಸಣ್ಣ ಕಥೆಗಳನ್ನು ಓದಿ ಚರ್ಚಿಸಿದರು.

ಕೊರಡ್ಕಲ್ ಶ್ರೀನಿವಾಸರಾವ್ ಅವರು ಬರೆದ 'ಧಣಿಯರ ಸತ್ಯನಾರಾಯಣ' ಎಂಬ ಕನ್ನಡದ ಕಥೆಯನ್ನು ಓದುವುದಕ್ಕೆ ಆರಿಸಿಕೊಳ್ಳಲಾಗಿತ್ತು. 1930ರ ದಶಕದ ಕೊನೆಯ ಭಾಗದಲ್ಲಿ ನಡೆಯುವ ಈ ಕಥೆಯು ಬಡ ರೈತವರ್ಗವು ಹೇಗೆ ಭೂಮಾಲೀಕರ ಶೋಷಣೆಗೆ ಒಳಗಾಗುತ್ತದೆ ಎಂಬುದನ್ನು ಸಶಕ್ತವಾಗಿ ಹಿಡಿದಿಡುತ್ತದೆ. ಇಂಗ್ಲಿಷ್ ಭಾಷೆಯ ಅಧಿವೇಶನದಲ್ಲಿ ಭಾಗವಹಿಸಿದ್ದವರು ರವೀಂದ್ರನಾಥ ಟಾಗೋರರ 'ದ ಎಕ್ಸರ್‌ಸೈಜ್ ಬುಕ್'ನ್ನು ಓದಿ ಚರ್ಚಿಸಿದರು. ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದವರನ್ನು ಚಟುವಟಿಕೆಗಳಲ್ಲಿ ಸೂಕ್ಷ್ಮವಾದ ರೀತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿದರು. ಇದು ಅವರಿಗೆ ಪಠ್ಯವೊಂದನ್ನು ಸೂಕ್ಷ್ಮವಾಗಿ, ಹತ್ತಿರದಿಂದ ಹೇಗೆ ಓದಬೇಕು ಹಾಗೂ ತಮ್ಮದೇ ಆದ ತೀರ್ಮಾನಗಳಿಗೆ ಹೇಗೆ ಬರಬೇಕು, ಅರ್ಥವಿವರಣೆಗಳನ್ನು ಮಾಡಬೇಕು ಎಂಬುದರ ಕುರಿತು ಮಾರ್ಗದರ್ಶನ ನೀಡಿತು.

ಸಾಹಿತ್ಯದ ಸೌಂದರ್ಯಾತ್ಮಕ ಹಾಗೂ ಸೃಜನಾತ್ಮಕ ಅಂಶಗಳ ಸೂಕ್ಷ್ಮತೆಯನ್ನು ಶೋಧಿಸುವಲ್ಲಿ ಸಾಹಿತ್ತಿಕ ಗುಂಪು ಚರ್ಚೆಯ ಸಾಮರ್ಥ್ಯವನ್ನು ಚರ್ಚೆಗಳು ಸ್ಪಷ್ಟವಾಗಿ ಹೊರತಂದವು. ಭಾಗವಹಿಸಿದ್ದವರು ಹೊಂದಿದ್ದ ಒಳನೋಟಗಳು ಹಾಗೂ ತಮ್ಮದೇ ಆದ ತೀರ್ಮಾನಗಳಿಗೆ ಬರಲು ಅವರು ಪಠ್ಯವನ್ನು ವಿಶ್ಲೇಷಿಸುವುದಕ್ಕಾಗಿ ಉಪಯೋಗಿಸಿದ ತಂತ್ರಗಳ ರೀತಿಯನ್ನು ನೋಡಿದರೆ

ಬೆರಗಾಗುತ್ತದೆ. ಹುರುಪಿನಿಂದ ಕೂಡಿದ ಆ ಚರ್ಚೆಗಳು, ಸಂತೋಷಭರಿತ ಮತ್ತು ಅರ್ಥಪೂರ್ಣ ಓದು, ರಸಗ್ರಹಣ ಎನ್ನುವುದು ಶಿಕ್ಷಕರ ಮಟ್ಟಿಗೆ ಗತಸಂಗತಿಯಲ್ಲ ಎನ್ನುವುದಕ್ಕೆ ಉತ್ತಮ ಸಾಕ್ಷಿಯಾಗಿದ್ದವು. ಓದಲು ಅವಕಾಶಗಳನ್ನು ಒದಗಿಸಿದರೆ ಹಾಗೂ ಗುಣಮಟ್ಟದ ಸಾಹಿತ್ಯಕ್ಕೆ ಅವರು ತೆರೆದುಕೊಳ್ಳುವಂತೆ ಮಾಡಿದರೆ ಶಿಕ್ಷಕರಲ್ಲಿ ಓದಿನ ಪ್ರೀತಿಯನ್ನು ಮತ್ತು ಸಾಹಿತ್ಯದ ಒಲವನ್ನು ಬೆಳೆಸಲು ಸಾಧ್ಯವಿದೆ, ಅದು ಕಾಲಕ್ರಮೇಣ ಅವರ ತರಗತಿಕೋಣೆಗೂ ಕೂಡ ವಿಸ್ತರಿಸಬಲ್ಲುದು ಎನ್ನುವುದನ್ನು ಇದು ಒತ್ತಿ ಹೇಳುತ್ತದೆ.

ಶಾಲಾ ಗ್ರಂಥಾಲಯಗಳ ವಿನ್ಯಾಸ ಹಾಗೂ ಬಳಕೆ

ಗ್ರಂಥಪಾಲನೆಯಲ್ಲಿ ಅನುಭವ ಹೊಂದಿದವರು ನಡೆಸಿಕೊಟ್ಟ ಗ್ರಂಥಾಲಯ ಕಾರ್ಯಾಗಾರವು ಅನೌಪಚಾರಿಕವಾಗಿತ್ತು ಹಾಗೂ ಒಳನೋಟಗಳನ್ನು ಹೊಂದಿತ್ತು. ಗ್ರಂಥಾಲಯದ ಮೂಲಭೂತ ಅಂಶಗಳನ್ನು ದೀರ್ಘವಾಗಿ ಚರ್ಚಿಸಿದ ಗುಂಪಿನಲ್ಲಿ ಲವಲವಿಕೆ ಎದ್ದು ತೋರುತ್ತಿತ್ತು. ಶಿಬಿರಾರ್ಥಿಗಳು ಎತ್ತಿದ ಅನೇಕ ಸಂಗತಿಗಳಲ್ಲಿ, ಚೈತನ್ಯಪೂರ್ಣ ಹಾಗೂ ಪರಿಣಾಮಕಾರಿ ಪುಸ್ತಕ ಸಂಗ್ರಹ, ಅನುಸಂಧಾನ, ಸಂಬಂಧಿತ ವ್ಯಕ್ತಿ, ಪುಸ್ತಕಗಳ ವ್ಯವಸ್ಥಿತ ಜೋಡಣೆ ಹಾಗೂ ಸ್ಥಳಾವಕಾಶ ಎಂಬ ಐದು ಮೂಲಭೂತ ಅಂಶಗಳ ಮೇಲೆ ಗಮನವನ್ನು ಕೇಂದ್ರೀಕರಿಸಲಾಯಿತು. ಗ್ರಂಥಾಲಯವೊಂದನ್ನು ಹೇಗೆ ಓದುಗರಿಗೆ ಆಕರ್ಷಕವಾಗುವ ಹಾಗೆ ರೂಪಿಸಬಹುದು ಎನ್ನುವುದನ್ನು ಆಳವಾಗಿ ಅರ್ಥಮಾಡಿಕೊಳ್ಳುವುದಕ್ಕಾಗಿ ಇವುಗಳಲ್ಲಿ ಪ್ರತಿಯೊಂದು ಅಂಶವನ್ನೂ ವಿವರವಾಗಿ ಚರ್ಚಿಸಲಾಯಿತು.

ಗ್ರಂಥಾಲಯವನ್ನು ತೆರೆಯುವುದು/ಮುಚ್ಚುವುದು, ಪುಸ್ತಕಗಳನ್ನು ವರ್ಗೀಕರಿಸಿ ಆಕರ್ಷಕವಾಗಿ ಜೋಡಿಸಿಡುವುದು, ಗ್ರಂಥಾಲಯದ ಆವರಣವನ್ನು ಮುಕ್ತ ಹಾಗೂ ಮನಸೆಳೆಯುವಂತೆ ಮಾಡಲು ಪೀಠೋಪಕರಣ ಹಾಗೂ ಪುಸ್ತಕಗಳನ್ನು ಸೂಕ್ತ, ಉಚಿತ ಜಾಗದಲ್ಲಿ ಇಡುವುದು ವಾರ್ಷಿಕ ಆಯ-ವ್ಯಯಕ್ಕೆ ಸಂಬಂಧಿಸಿದ ಯೋಜನೆ ತಯಾರಿ ಇತ್ಯಾದಿಗಳು ಸಂಬಂಧಿತ ವ್ಯಕ್ತಿಯು ಮಾಡಬೇಕಾದ ಅಗತ್ಯ ಕಾರ್ಯಗಳು. ತಮ್ಮ ಸಮಯವೆಲ್ಲವೂ ಆಡಳಿತಾತ್ಮಕ/ನೋಂದಣಿ ಕಾರ್ಯದಲ್ಲಿಯೇ ಕಳೆದು ಹೋಗದಂತೆ ಅವರು ಗ್ರಂಥಾಲಯದ ಬಳಕೆಯ ಬಗ್ಗೆ ಓದುಗರಿಗೆ ತಿಳುವಳಿಕೆ ನೀಡಬಹುದು ಹಾಗೂ ಓದುಗರೊಡನೆಯ ಸಂವಾದದ ಮೇಲೆ ಗಮನವನ್ನು ಕೇಂದ್ರೀಕರಿಸಬಹುದು. ಯುವ ಓದುಗರೊಡನೆ ನಲವತ್ತು ನಿಮಿಷಗಳ ಕಾಲವನ್ನು ತಾನು ಹೇಗೆ ಕಳೆಯಬಯಸುತ್ತೇನೆ ಎಂಬುದನ್ನು ಯೋಜಿಸಬಹುದು.

ಸಂಬಂಧಿತ ವ್ಯಕ್ತಿಯ ಅರ್ಥಪೂರ್ಣ ಅನುಸಂಧಾನವು ಓದುಗರನ್ನು ವಿವಿಧ ಚಟುವಟಿಕೆಗಳ ಮೂಲಕ ತೊಡಗಿಸಿಕೊಳ್ಳುವುದು ಹಾಗೂ ಕುತೂಹಲವನ್ನು ಹುಟ್ಟಿಸುವುದು, ಓದನ್ನು ಉತ್ತೇಜಿಸುವ ರೀತಿಯಲ್ಲಿ ಪುಸ್ತಕ ಎರವಲು ಪಡೆಯುವುದು ಮತ್ತು ನಿಭಾಯಿಸುವುದನ್ನು ಒಳಗೊಳ್ಳುತ್ತದೆ. ಪುಸ್ತಕದ ಸಂಗ್ರಹವು ಚೇತೋಹಾರಿಯಾಗಿರಬೇಕು, ಓದುಗರನ್ನು ಆಕರ್ಷಿಸುವಂತೆ ಇರಬೇಕು. ಹೊಸ ಪುಸ್ತಕಗಳನ್ನು ನಿರಂತರವಾಗಿ ಸಂಗ್ರಹಕ್ಕೆ ಸೇರಿಸುತ್ತಿರಬೇಕು. ಸಂಗ್ರಹದಲ್ಲಿ ವಿವಿಧ ಭಾಷೆಯ ಪುಸ್ತಕಗಳೂ ಸೇರಿರಬೇಕು. ಗ್ರಂಥಾಲಯದ ತಾಣವು ಗಾಳಿ–ಬೆಳಕುಗಳು ಚೆನ್ನಾಗಿ ಬರುವಂತೆ ಮುಕ್ತವಾಗಿದ್ದು, ಆರಾಮದಾಯಕ ಆಸನ ವ್ಯವಸ್ಥೆಯನ್ನು ಹೊಂದಿದ್ದು ಓದುಗರನ್ನು ಆಕರ್ಷಿಸಬೇಕು.

ಮಕ್ಕಳನ್ನು ತೊಡಗಿಸುವ ವಿವಿಧ ವಿಧಾನಗಳು ಹಾಗೂ ಮಕ್ಕಳಲ್ಲಿ ಪುಸ್ತಕಗಳ ಬಗ್ಗೆ ಆಸಕ್ತಿ ಮತ್ತು ಕುತೂಹಲವನ್ನು ಹೇಗೆ ಹುಟ್ಟಿಸಬೇಕು ಎನ್ನುವುದರ ಕುರಿತಂತೆ ಚರ್ಚೆ ನಡೆಯಿತು. ಗ್ರಂಥಾಲಯವೆಂದರೆ, ಎದ್ದುಕಾಣುವ ದೊಡ್ಡದಾದ, ಎತ್ತರದ ಛಾವಣಿಯಿರುವ ಕಟ್ಟಡ, ಗೋಡೆಗಳುದ್ದಕ್ಕೂ ಬರೆದ 'ನಿಶ್ಯಬ್ದ' ಎಂಬ ಬರೆಹ, ಇರುಸುಮುರುಸು ಉಂಟುಮಾಡುವ, ಭಯಹುಟ್ಟಿಸುವ ವಾತಾವರಣ ಎಂಬ ಚಿತ್ರವನ್ನು ನಿವಾರಿಸಲು ಈ ಚರ್ಚೆಯು ಯಶಸ್ವಿಯಾಯಿತು. ಗ್ರಂಥಾಲಯವೆಂದರೆ ಶಾಂತ, ನಿಶ್ಯಬ್ದ ತಾಣ ಎಂಬ ಕಲ್ಪನೆ ಬಹುತೇಕವಾಗಿ ಯಾವಾಗಲೂ ಇರುತ್ತಿದ್ದು ಅದು ನಿಜಕ್ಕೂ ಹಾಗೆಯೇ ಇರಬೇಕೇ ಎಂಬುದಾಗಿ ಚರ್ಚಿಸಲಾಯಿತು. ಸುಗಮಕಾರರು, ಅಷ್ಟೇನೂ ಶಾಂತವಲ್ಲದ ಓದಿನ ಗೋಷ್ಠಿಗಳನ್ನು ಸೃಷ್ಟಿಸುವ ಮೂಲಕ ಓದುಗರನ್ನು ತೊಡಗಿಸುವ ಹಾಗೂ ಒಳಗೊಳ್ಳುವ ಅಗತ್ಯವನ್ನು ಒತ್ತಿಹೇಳಿದರು.

ಪ್ರಾಮುಖ್ಯತೆಯ ಅನುಕ್ರಮದಲ್ಲಿ ಸಂಬಂಧಿತ ವ್ಯಕ್ತಿ, ಸಂಗ್ರಹ, ಸಂವಾದ, ವ್ಯವಸ್ಥಿತ ಆಯೋಜನೆ ಹಾಗೂ ಸ್ಥಳಾವಕಾಶದ ಅಂಶಗಳ ಮೇಲೆ ಒತ್ತು ನೀಡಲು ಸುಗಮಕಾರರು ಚಟುವಟಿಕೆಯೊಂದನ್ನು ಬಳಸಿಕೊಂಡರು.

ಪುಸ್ತಕಗಳ ಆಯ್ಕೆ

ಪುಸ್ತಕವೊಂದು ಪಂಚತಾರಾ ಪುಸ್ತಕ ಎಂದು ಕರೆಯಿಸಿಕೊಳ್ಳಲು ವಸ್ತುವಿಷಯ, ಹಂದರ, ಭಾಷೆ, ತೊಡಗಿಸಿಕೊಳ್ಳುವಿಕೆ, ಪಾತ್ರಗಳು, ಸಂರಚನೆ, ಚಿತ್ರಣ, ವಿನ್ಯಾಸ, ನಿರ್ಮಾಣ, ಮೌಲ್ಯ, ಒಳಗೊಳ್ಳುವಿಕೆ, ಸಂವೇದನಾಪೂರ್ಣತೆ ಹಾಗೂ ವಾಸ್ತವಿಕ ಸ್ವರೂಪ ಮುಂತಾದ ಕೆಲವು ಅಂಶಗಳನ್ನು ಹೊಂದಿರಬೇಕಾಗಿರುತ್ತದೆ. ಕಥೆ ಸುಖಾಂತ್ಯವೇ ಆಗಿರಬೇಕೆಂದೇನೂ ಇಲ್ಲ.

ಮತ್ತಷ್ಟು ವಿವರವಾಗಿಯೂ ಚರ್ಚಿಸಲಾದ ಅಂಶಗಳು ಹೀಗಿವೆ: ಕಥೆಯ ವಸ್ತು ವಿಷಯವು ಮಗುಸ್ನೇಹಿಯಾಗಿರಬೇಕು, ಓದುವ ವ್ಯಕ್ತಿಯು ತನ್ನ ಅನುಭವಗಳನ್ನು ಕುರಿತು ಪರ್ಯಾಲೋಚಿಸುವಂತೆ ಮಾಡಬೇಕು ಹಾಗೂ ತನ್ನನ್ನು ತೊಡಗಿಸಿಕೊಳ್ಳುವಂತಿರಬೇಕು. ಭಾಷೆ ಸರಳವಾಗಿರಬೇಕು, ಲಯಬದ್ಧ-ವಾಗಿರಬೇಕು, ಓದಲು ಸರಾಗವಾಗಿರಬೇಕು ಹಾಗೂ ಅರ್ಥವಾಗುವಂತಿರಬೇಕು, ಉಲ್ಲಾಸ ನೀಡುವಂತಿರಬೇಕು, ಸಹಜವಾಗಿ ಮಾತನಾಡುವ ಭಾಷೆಗೆ ಹತ್ತಿರವಿರಬೇಕು ಹಾಗೂ ಮಗುವಿನ ವಯಸ್ಸಿಗೆ ಸೂಕ್ತವಾಗಿರಬೇಕು.

ಆಯ್ಕೆಯಾದ ಪುಸ್ತಕಗಳು ವಾಸ್ತವಿಕತೆಯಿಂದ ಕೂಡಿದ್ದು, ನಿಷ್ಪಕ್ಷಪಾತಿಯಾಗಿರಬೇಕು (ಉದಾಹರಣೆಗೆ ಲಿಂಗದ ವಿಷಯದಲ್ಲಿ), ಸಮಾಜದಲ್ಲಿನ ವಿವಿಧ ಸಮಸ್ಯೆಗಳ ಕುರಿತು ಸೂಕ್ಷ್ಮಸಂವೇದನೆಯನ್ನು ಹೊಂದಿದ್ದು, ಅಹಿಂಸಾತ್ಮಕವಾಗಿ, ದೈನಂದಿನ ಜೀವನಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಸಂಬಂಧಿಸಿದ್ದಾಗಿರಬೇಕು ಎಂಬಿತ್ಯಾದಿ ಸಂಗತಿಗಳನ್ನು ತಿಳಿದುಕೊಳ್ಳುವ ಅಗತ್ಯವನ್ನು ಕೂಡ ಒತ್ತಿ ಹೇಳಲಾಯಿತು. ವಿಶೇಷ ಸಾಮರ್ಥ್ಯವಿರುವವರನ್ನು ಸಾಮಾನ್ಯವಾಗಿ ನೋಡುವ ರೀತಿಯನ್ನು ಅನುಸರಿಸದೇ ಶಿಕ್ಷಕರು ಅವರನ್ನು ಕುರಿತಾಗಿ ಸದ್ಯ ಇರುವ ರೂಢಿಗತ ಆಲೋಚನೆಯನ್ನು ಮುರಿಯಲು ನೆರವಾಗಬೇಕು. ಪುಸ್ತಕಗಳಲ್ಲಿನ ವಸ್ತುವಿಷಯವು ಮಕ್ಕಳಿಗೆ ಪುಸ್ತಕದೊಡನೆ ಭಾವನಾತ್ಮಕ ಸಂಬಂಧವನ್ನು ಹೊಂದಲು ಹಾಗೂ ಇತರರ ಅಭಿಪ್ರಾಯವನ್ನು ಗೌರವಿಸುವುದನ್ನು ಕಲಿಯಲು ಸಹಾಯಮಾಡಬೇಕು. ಪುಸ್ತಕಗಳನ್ನು ವಿವಿಧ ಭಾಷೆಗಳಿಗೆ ಅನುವಾದಿಸುವಂತೆ ಹಿರಿಯ ತರಗತಿಗಳಲ್ಲಿ ಓದುತ್ತಿರುವ ಮಕ್ಕಳ ಮನವೊಲಿಸಬಹುದು. ಇದು ಅವರಲ್ಲಿ ತಾವು ಕೂಡ ಕೊಡುಗೆ ನೀಡುತ್ತಿದ್ದೇವೆ ಎಂಬ ಭಾವವನ್ನು ಹುಟ್ಟಿಸುತ್ತದೆ ಹಾಗೂ ಅವರು ಶಾಲಾ ಗ್ರಂಥಾಲಯದ ಭಾಗವಾಗುವಂತೆ ಅವರನ್ನು ಉತ್ತೇಜಿಸುತ್ತದೆ.

ಗ್ರಂಥಾಲಯ ಕಾರ್ಯಾಗಾರವನ್ನು ಆಯೋಜಿಸಲು ಬಹಳಷ್ಟು ಚರ್ಚೆ, ಪರಿಕಲ್ಪಿಸುವಿಕೆ, ಯೋಜನೆ ಹಾಗೂ ಕ್ಷೇತ್ರದಲ್ಲಿನ ಕೆಲಸಗಳು ನಡೆದಿವೆ. ಹೀಗೆ ಕಥಾವನವು ಅನನ್ಯ ರೀತಿಯಲ್ಲಿ ಫಲಪ್ರದವಾಗಿತ್ತು.

■

ಬಿ ಫಸ್ಟ್, 07–12–2016